# ಆಡಿಷನ್ ಮೂಲಕವೇ ಪಾತ್ರ ಸಿಗಬೇಕು

## ಶಶಿರಾಜ್
ಝೀ ಕನ್ನಡ 'ಸತ್ಯ'ದ ಬಾಲ

■ ರಾಘವೇಂದ್ರ ಕೆ.

◆ **ಸತ್ಯದಲ್ಲಿ ಬಾಲನ ಮಹತ್ವ ಏನು? ಅವನೇಕೆ ಹಾಗಿದ್ದಾನೆ?**

ನನ್ನ ಪಾತ್ರ ಹೀಗೇ ಎಂದು ವೀಕ್ಷಕರು ಅಂದುಕೊಳ್ಳುವಷ್ಟರಲ್ಲಿ ಅದರ ಸ್ವಭಾವ ಬದಲಾಗುತ್ತದೆ. ಬಡವನಾ–ಶ್ರೀಮಂತನಾ, ಒಳ್ಳೆಯವನಾ–ಕೆಟ್ಟವನಾ ಎಂದು ಯೋಚಿಸಲು ಸಾಧ್ಯವೇ ಇಲ್ಲ. ಪ್ರೀತಿಗೋಸ್ಕರ ಏನೆಲ್ಲ ಮಾಡಲು ಅವನು ಸಿದ್ಧ. ಮೋಸ ಮಾಡುತ್ತಾನೆ. ಊರ ತುಂಬ ಸುಳ್ಳು ಹೇಳುತ್ತಾನೆ. ತನಗೆ ಬೇಕು ಎಂದರೆ, ಏನಾದರೂ ಕತೆ ಕಟ್ಟುವ ಚಾಣಾಕ್ಷ. ಆತ ಒಂದು ಹುಡುಗಿಯನ್ನು ತುಂಬ ಪ್ರೀತಿಸುತ್ತಾನೆ. ಅವಳ ಮನಸ್ಥಿತಿ ಅರ್ಥ ಮಾಡಿಕೊಳ್ಳುತ್ತಾನೆ. ಅವಳಿಗೆ ನಿಶ್ಚಿತಾರ್ಥವಾಗಿದೆ, ಮೋಸ ಮಾಡಿದ್ದಾಳೆ ಎಂದುಕೊಂಡಿದ್ದಾನೆ. ಆದರೂ ಬಿಡಲ್ಲ, ಅವಳಿಗಾಗಿ ಏನಾದರೂ ಮಾಡಬೇಕು ಎಂದು ಯೋಚಿಸುತ್ತಾನೆ. ಬಡವನಾದರೂ ಶ್ರೀಮಂತನಂತೆ ವೈಭವದಿಂದ ಬದುಕುತ್ತಿರುತ್ತಾನೆ. ಸಾಕಷ್ಟು ದುಡ್ಡಿದೆ, ತನ್ನ ಅಪ್ಪ ವಿದೇಶದಲ್ಲಿ ಇದ್ದಾರೆ ಎಂದು ಸುಳ್ಳುಹೇಳುತ್ತಾನೆ. ಅದೆಲ್ಲ ಅವಳಿಗಾಗಿ. ಈತ ಒಳ್ಳೆಯವನೂ ಹೌದು, ಕೆಟ್ಟವನೂ ಹೌದು. ಈ ಒಂದೇ ಪಾತ್ರಕ್ಕೆ ಭಿನ್ನ ಬಣ್ಣದ ರೂಪಗಳಿವೆ. ನಗು–ಅಳು ಎರಡೂ ಇವೆ. ಪಾತ್ರವಾಗಿ ಅಭಿನಯಕ್ಕೆ ಹೆಚ್ಚು ಮಹತ್ವವನ್ನು ನೀಡುತ್ತದೆ.

◆ **ಕಾರ್ಪೊರೇಟ್ ಜಗತ್ತಿನಲ್ಲಿ ರಂಗಭೂಮಿಯ ಮೋಹ ಹುಟ್ಟಿದ್ದು ಹೇಗೆ?**

ಬಾಲ್ಯದಿಂದಲೂ ಅತ್ಯಂತ ಕಡಿಮೆ ಮಾತನಾಡುವ ಹುಡುಗ ನಾನು. ಬೆಂಗಳೂರು ಜಯನಗರ ನ್ಯಾಷನಲ್ ಕಾಲೇಜಿನಲ್ಲಿ ಪಿಯು ಓದುವಾಗ 'ಮೂರು ಮುತ್ತು' ಎಂಬ ನಾಟಕ ಮಾಡಿದೆವು. ನನಗೆ ಒಂದು ಅವಾರ್ಡ್ ಬಂತು. ಜನ ನನ್ನನ್ನೂ ಗುರುತಿಸುತ್ತಾರೆ ಎಂದು ಅನಿಸಿತು. ವೇದಿಕೆ ಖುಷಿ ಕೊಡುತ್ತದೆ ಎಂಬ ಭಾವನೆಯನ್ನು ನೀಡಿತು. ಅಲ್ಲಿ ಬಂದ ತೀರ್ಪುಗಾರರು 'ಸಂಚಯ' ಎಂಬ ನಾಟಕ ತಂಡಕ್ಕೆ ಪರಿಚಯಿಸಿದರು. ನಂತರ ಬಿಇ ಮುಗಿಸಿ ಇನ್ಫೋಸಿಸ್‌ಗೆ ಕೆಲಸಕ್ಕೆ ಸೇರಿದೆ. ಆಗ ರಂಗಭೂಮಿಯ ಕೊಂಡಿ ಕಳಚಿತು. ಕಂಪನಿಯಲ್ಲಿ ನಡೆಯುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೆ. ಅಲ್ಲಿನ ಹಿರಿಯರು– ಗೆಳೆಯರು ಪ್ರೋತ್ಸಾಹಿಸಿದರು. ಅದೇ ಸಮಯದಲ್ಲಿ ಸಿಕ್ಸ್ ಪ್ಯಾಕ್ ಮಾಡುವ ಹುಚ್ಚು ಬಂತು. ಮಧ್ಯ ರಾತ್ರಿಯಲ್ಲೂ ವರ್ಕೌಟ್ ಮಾಡಿ ಬಾಡಿ ಬಿಲ್ಡ್ ಮಾಡಲು ಶುರು ಮಾಡಿದೆ. ಅಷ್ಟರಲ್ಲಿ ರಾಕೇಶ್ ಎಂಬ ರಂಗ ಗೆಳೆಯನ ಸ್ನೇಹ ಮತ್ತೆ ರಂಗದ ನಂಟು ಬೆಳೆಸಿತು. ಕ್ರಮೇಣ ಉದ್ಯೋಗ ಬಿಟ್ಟು ನಟನೆಯನ್ನು ವೃತ್ತಿಯಾಗಿ ತೆಗೆದುಕೊಳ್ಳುವ ನಿರ್ಧಾರ ಮಾಡಿದೆ. ಇವತ್ತಿಗೂ ರಂಗದ ಮೇಲೆ ನಿಂತರೆ ಖುಷಿಯಾಗುತ್ತದೆ ಈಗಲೂ ನಾಟಕ ಆಡುತ್ತೇನೆ.

◆ **ನಿಶ್ಚಿತ ಆದಾಯ ಬಿಟ್ಟು ಅನಿಶ್ಚಿತ ವೃತ್ತಿಯನ್ನು ಆರಂಭಿಸಲು ದಿಗಿಲು ಆಗಲಿಲ್ಲವೇ?**

ಆ ಭಯ ಇರುವುದರಿಂದಲೇ ನನ್ನನ್ನು ನಿರಂತರವಾಗಿ ಕ್ರಿಯಾಶೀಲನಾಗಿ ಇರುವಂತೆ ಮಾಡಿದೆ. ಸಮಯವನ್ನು ವ್ಯರ್ಥ ಮಾಡದೆ ಕೆಲಸ ಮಾಡುತ್ತಿದ್ದೇನೆ. ಇಂತಹ ರಿಸ್ಕ್ ತೆಗೆದುಕೊಳ್ಳದಿದ್ದರೆ ಏನೂ ಮಾಡಲು ಆಗುವುದಿಲ್ಲ. ಜೀವನ ಪೂರ್ತಿ ಇಲ್ಲೇ ಇರಲು ಸಾಧ್ಯ ಇದೆಯೋ ಇಲ್ಲವೋ ಗೊತ್ತಿಲ್ಲ. ನಾನು ಗುರಿಯನ್ನು ಹಾಕಿಕೊಂಡಿದ್ದೇನೆ. ಎರಡು ದೋಣಿಯ ಮೇಲೆ ಕಾಲಿಡದೆ. ಒಂದೇ ದೋಣಿಯ ಮೇಲೆ ಸಾಗಬೇಕು. ಹಣಕಾಸಿನ ದೃಷ್ಟಿಯಿಂದ ಕೆಲಸ ಮಾಡಿದರೆ ಸಬಲ ಆಗುತ್ತೇನೆ. ಎರಡೇ ವರ್ಷದಲ್ಲಿ ಪ್ರಮುಖ ನಟ ಎಂದು ಗುರುತಿಸಿಕೊಳ್ಳುತ್ತೇನೆ.

◆ **ಸಿನಿಮಾ ಪಾತ್ರ ಸಿಕ್ಕರೆ ಏನು ನೋಡಿ ಒಪ್ಪಿಕೊಳ್ಳುತ್ತೀರಿ?**

ಮೊದಲು ಕಥೆಯನ್ನು ಕೇಳುತ್ತೇನೆ. ಆ ಕಥೆಯಲ್ಲಿ ನನ್ನ ಪಾತ್ರದ ಪ್ರಾಮುಖ್ಯತೆ ಏನು ಎಂದು ನೋಡುತ್ತೇನೆ. ಕಥೆ ಕೇಳಿದ ನನಗೆ ಅದು ಕಾಡುವಂತೆ ಇರಬೇಕು. ಅದರ ಧ್ಯಾನದಲ್ಲಿ ಮುಳುಗುವಂತೆ ಮಾಡಬೇಕು. ನನಗೆ ತುಂಬ ಮಾತನಾಡುವ ಪಾತ್ರ ಇಷ್ಟ ಆಗಲಾರದು. ಕಷ್ಟದ ಪಾತ್ರಗಳು ಸಿಕ್ಕರೆ ಇಷ್ಟ ಆಗುತ್ತವೆ. ಸಿನಿಮಾದಲ್ಲಿ ನನಗೆ ಪಾತ್ರ ಮುಖ್ಯ. ನಿರ್ದೇಶಕರಿಗೆ ಸಿನಿಮಾ ಮುಖ್ಯ. ಆಗ ಇರಬಹುದಾದ ಸಂದೇಹಗಳನ್ನು ಅವರ ಜೊತೆ ಕೇಳಿಕೊಳ್ಳುತ್ತೇನೆ. ಅವರು ಪ್ರೀತಿಯಿಂದ ಸ್ಪಂದಿಸಿದರೆ ಮಾತ್ರ ಪಾತ್ರವನ್ನು ಒಪ್ಪಿಕೊಳ್ಳುವುದು. ಸಿನಿಮಾಗಳಿಗೆ ಅವಕಾಶಗಳು ಬರುತ್ತಿವೆ. ಇವತ್ತಷ್ಟೇ ಒಂದು ಸಿನಿಮಾದ ನಾಯಕನ ಪಾತ್ರಕ್ಕೆ ರುಜು ಮಾಡಿದ್ದೇನೆ. ಆಡಿಷನ್ ಮೂಲಕವೇ ಪಾತ್ರ ಸಿಗಬೇಕು ಎಂದು ಬಯಸುತ್ತೇನೆ. ಪಾತ್ರವಾಗಿ ನಾಯಕನೇ ಆಗಬೇಕು ಖಳನಾಯಕನೇ ಆಗಬೇಕು ಎಂದಿಲ್ಲ. ಒಂದು ಪಾತ್ರವನ್ನು ಮುಖ ನೋಡಿ ಕೊಡುವುದಕ್ಕಿಂತ ಸ್ಕ್ರೀನ್ ಟೆಸ್ಟ್ ಮಾಡಿಕೊಡಬೇಕು. ■

